ಕಾರವಾರ ತಾಲ್ಲೂಕಿನ ಗಜನಿ ಭೂಮಿ ಬಗ್ಗೆ

೯೬೮(೧೪೪೦) ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ).—ಮಾನ್ಯ ಲೋಪಯೋಗಿ ಮತ್ತು ನೀರಾವರಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಕಾರವಾರ ತಾಲ್ಲೂಕಿನ ಈ ಕೆಳಗೆ ಕಾಣಿಸಿದ ಗಜನಿ ವಡ್ಡಿನ ಸರಿಯಾದ ದುರಸ್ತಿ ಇಲ್ಲದೆ ಗಜನಿ ಭೂಮಿ ಹಾನಿಯಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ.—

೧. ಕಡವಾಡ ಗಜನಿ ವಡ್ಡು ೨. ಚಿತಾಕುಲ ಗಜನಿವಡ್ಡು ೩. ಕಣಸಗೇರಿ ಗಜನಿ ವಡ್ಡು
೪. ಚಂಡಿಯಾ ಗಜನಿವಡ್ಡು ೫. ಅಮದಳ್ಳಿಗಜನಿ ವಡ್ಡು ೬. ಹಣಕೋಣ ಗಜನಿ ವಡ್ಡು

ಆ) ಇದನ್ನು ಸರಿಪಡಿಸಲು ಸರ್ಕಾರವು ಕೈಗೊಂಡ ಕ್ರಮಗಳಾವುವು ?

ಇ) ಕಡವಾಡ ಕಿನ್ನಾರ ಗಜನಿ ವಡ್ಡಿನ ಕಾಮಗಾರಿ ಅರ್ಧಕ್ಕೆ ನಿಂತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಇದನ್ನು ಪೂರ್ತಿಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ಗಜನಿ ಒಡ್ಡುಗಳನ್ನು ದುರಸ್ತಿಗೊಳಿಸಲು ಈ ಕೆಳಕಂಡ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

೧. ಕಡವಾಡ ಗಜನಿ ಒಡ್ಡು — ದುರಸ್ತಿ ಕಾರ್ಯವು ಪ್ರಗತಿಯಲ್ಲಿದೆ.

೨. ಚಿತ್ತಾಕುಲ ಗಜನಿ ಒಡ್ಡು — ಜಿಲ್ಲಾಪರಿಷತ್ತಿನಿಂದ ಅನುದಾನವಿಲ್ಲದ ಕಾರಣ ದುರಸ್ತಿ ಕಾರ್ಯ ಕೈಗೊಂಡಿರುವುದಿಲ್ಲ.

೩. ಕಣಸಗೇರಿ ಗಜನಿ ಒಡ್ಡು — ಜಿಲ್ಲಾಪರಿಷತ್ತಿನಿಂದ ಅನುದಾನವಿಲ್ಲದ ಕಾರಣ ದುರಸ್ತಿಕಾರ್ಯ ಕೈಗೊಂಡಿರುವುದಿಲ್ಲ.

೪. ಚಂಡಿಯಾ ಗಜನಿ ಒಡ್ಡು — ರೂ. ೩.೮೦ ಲಕ್ಷಗಳ ಅಂದಾಜು ತಯಾರಿಸಿದ್ದು ಅನುದಾನದ ಕೊರತೆಯಿಂದ ದುರಸ್ತಿ ಕಾರ್ಯ ಕೈಗೊಂಡಿರುವುದಿಲ್ಲ.

೫. ಅಮದಳ್ಳಿ ಗಜನಿ ಒಡ್ಡು — ಜಿಲ್ಲಾ ಪರಿಷತ್ ೧೯೬೯-೭೧ರ ಬಜೆಟ್‌ನಲ್ಲಿ ಸೇರಿದ್ದು ಅಂದಾಜು ತಯಾರಿಸಲಾಗಿದ್ದು ಕೆಲಸವನ್ನು ಸದ್ಯದಲ್ಲಿ ಪ್ರಾರಂಭಿಸಲಾಗುವುದು.

೬. ಹಣಕೋಣ ಗಜನಿ ಒಡ್ಡು — ಕೆಲಸವು ಪ್ರಗತಿಯಲ್ಲಿದ್ದು ಮುಕ್ತಾಯ ಹಂತದಲ್ಲಿದೆ.

ಇ) ಬಂದಿದೆ.

ಈ) ೬೬.೨೧ ಲಕ್ಷ ರೂ. ಗಳ ಕಾಮಗಾರಿಯ ಪರಿಷ್ಕೃತ ಅಂದಾಜು ಪರಿಶೀಲನೆಯಲ್ಲಿದ್ದು, ಆಡಳಿತಾತ್ಮಕ ಅನುಮೋದನೆಯಾದ ನಂತರ ಕೆಲಸವನ್ನು ಮುಂದುವರೆಸಲಾಗುವುದು.

ಜಿಲ್ಲಾಪರಿಷತ್ತು ಇಂಜಿನಿಯರಿಂಗ್ ವಿಭಾಗದ ರಸ್ತೆಗಳು

೯೬೯(೧೧೩೩) ಶ್ರೀ ಬಸವಂತರೆಡ್ಡಿ ಪೋತಕಪಲ್ಲಿ (ಸೇಡಂ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ : —

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಬಟಗೇರ—ಮೋತಕಪಲ್ಲಿ ರಸ್ತೆ ಹಾಗೂ ಕೋಲಕುಂದ ಮಲ್ಕಾಪಲ್ಲಿ ರಸ್ತೆ ಮೇಲೆ ೮೫-೮೬ನೇ ಸಾಲಿನಿಂದ ೮೯-೯೦ನೇ ಸಾಲಿನವರೆಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಲ್ಲಿಯಾಗಲೀ ಗ್ರಾಮೀಣ ಉದ್ಯೋಗ ಭರವಸೆ ಯೋಜನೆಯಲ್ಲಿಯಾಗಲೀ ಆಯವ್ಯಯದಲ್ಲಿಯಾಗಲೀ ಮತ್ತು ಪ್ರವಾಹದಿಂದ ಹಾನಿಗೀಡಾದ ಹಣದಲ್ಲೀ ಆಗಲೀ ಈ ರಸ್ತೆಗಳ ಉಸ್ತುವಾರಿಗೆ ಖರ್ಚು ಆದ ಹಣ ಎಷ್ಟು?

ಆ) ಈ ರಸ್ತೆಗಳ ಪೈಕಿ ಎಷ್ಟು ಕಿ. ಮೀ. ಪಕ್ಕಾ ರಸ್ತೆಯಾಗಿದೆ? ಇದಕ್ಕೆ ಖರ್ಚು ಆದ ಹಣ ಎಷ್ಟು?

ಇ) ಹಳೇ ರಸ್ತೆಯನ್ನು ಮೆಟಲ್ ರಸ್ತೆ ಮಾಡುವುದಕ್ಕೆ ಪ್ರತಿ ಕಿ. ಮೀ. ಆಗುವ ಖರ್ಚು ಎಷ್ಟು?

ಈ) ಈ ರಸ್ತೆಗಳ ಮೇಲೆ ಹೆಚ್ಚಿನ ಖರ್ಚು ಆಗಿಯೂ ಸಹ ಪಕ್ಕಾ ರಸ್ತೆಯಾಗದಿರಲು ಕಾರಣವೇನು?

ಉ) ಈ ರಸ್ತೆಗಳು ಪಕ್ಕಾ ರಸ್ತೆಯಾಗುವುದು ಯಾವಾಗ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ಸೀರಾವರಿ ಮಂತ್ರಿಯವರು).—

ಅ) ಕೋಲಕುಂದ—ಮಲ್ಲಾಪಲ್ಲಿ ಎಂಬ ರಸ್ತೆ ಇರುವುದಿಲ್ಲ. ಕೋಲಕುಂದ ಮೋತಕಪಲ್ಲಿ ಹಾಗೂ ಬಟಗೇರ—ಮೋತಕಪಲ್ಲಿ ಎಂಬ ಎರಡು ರಸ್ತೆಗಳು ಗ್ರಾಮೀಣ ರಸ್ತೆಗಳಾಗಿದ್ದು ಇವುಗಳಿಗಾಗಿ ವಿವಿಧ ಯೋಜನೆಯಡಿ ೮೫-೮೬ ರಿಂದ ೮೯-೯೦ರ ವರೆವಿಗೆ ಖರ್ಚಾದ ಹಣದ ವಿವರವನ್ನು ಅನುಬಂಧ-೧ ರಲ್ಲಿ ಕೊಡಲಾಗಿದೆ.

ಆ) ೧) ಬೆಟಗೇರ—ಮೋತಕಪಲ್ಲಿ ರಸ್ತೆಯ ಒಟ್ಟು ೩.೨.೮೦ ಕಿ. ಮೀ. ಉದ್ದದಲ್ಲಿ ೧೭ ಕಿ.ಮೀ. ಉದ್ದವು ಪಕ್ಕಾ ರಸ್ತೆಯಾಗಿದ್ದು, ೮೫-೮೬ ರಿಂದ ೮೯-೯೦ರ ವರೆಗೆ ೬.೮೯ ಲಕ್ಷ ರೂ. ಗಳನ್ನು ಖರ್ಚು ಮಾಡಿದೆ.

೨) ಕೋಲಕುಂದ—ಮೋತಕಪಲ್ಲಿ ರಸ್ತೆಯ ಒಟ್ಟು ೭.೦೦ ಕಿ. ಮೀ. ಉದ್ದದಲ್ಲಿ ೫ ಕಿ. ಮೀ. ಉದ್ದವು ಪಕ್ಕಾ ರಸ್ತೆಯಾಗಿದ್ದು, ೮೫-೮೬ ರಿಂದ ೮೯-೯೦ರ ವರೆವಿಗೆ ೧.೬೬ ಲಕ್ಷ ರೂ. ಗಳನ್ನು ಖರ್ಚು ಮಾಡಿದೆ.

ಇ) ಈ ರಸ್ತೆಯಲ್ಲಿ ಜಲ್ಲಿ ಹಾಸಲು ಪ್ರತಿ ಕಿ. ಮೀ. ಗೆ ಸುಮಾರು ೧.೫೦ ಲಕ್ಷ ರೂ.ಗಳಾಗುತ್ತದೆ.

ಈ) ಸದರೀ ರಸ್ತೆಗಳ ಮೇಲೆ ಕಳೆದ ಐದು ವರ್ಷಗಳಿಂದ ಮಾಡಿರುವ ಖರ್ಚನ್ನೂ ಹಾಗೂ ಸುಧಾರಿಸಿರುವ ರಸ್ತೆಯ ಉದ್ದವನ್ನು ಗಮನಿಸಿದಲ್ಲಿ ಹೆಚ್ಚಿನ ಖರ್ಚು ಆಗಿದೆ ಎಂದು ಹೇಳ ಬರುವುದಿಲ್ಲ.

ಉ) ಬೆಟಗೇರ—ಮೋತಕಪಲ್ಲಿ ರಸ್ತೆಯನ್ನು ೨೩ ಲಕ್ಷ ರೂ. ಗಳ ಅಂದಾಜಿನಲ್ಲಿ ೯೦-೯೧ನೇ ಸಾಲಿನಲ್ಲಿ ಪಕ್ಕಾ ರಸ್ತೆಯನ್ನಾಗಿ ಮಾಡುವ ಪ್ರಸ್ತಾವನೆಯನ್ನು ಹೈದರಾಬಾದ್—ಕರ್ನಾಟಕ ಅಭಿವೃದ್ಧಿ ಯೋಜನೆಯಡಿ ಪ್ರಸ್ತಾಪಿಸಲಾಗಿದೆ. ಹಾಗೂ ಕೋಲಕುಂದಾ ಮೋತಕಪಲ್ಲಿ ರಸ್ತೆಯನ್ನು ಗಡಿ ಪ್ರದೇಶ ರಸ್ತೆ ಅಭಿವೃದ್ಧಿ ಆಡಿ ಪಕ್ಕಾ ರಸ್ತೆಯನ್ನಾಗಿ ಮಾಡಲು ಪ್ರಸ್ತಾಪಿಸಲಾಗಿದೆ.

ಅನುಬಂಧ-೧

೧೯೮೫-೮೬ ರಿಂದ ೧೯೮೯-೯೦ ರವರೆಗೆ ವಿವಿಧ ಯೋಜನೆಯಡಿಯಲ್ಲಿ ವೆಚ್ಚದ ಪಟ್ಟಿ.
(ಲಕ್ಷ ರೂ. ಗಳಲ್ಲಿ)

ವರ್ಷ	ಬಟಗೆರೆ–ಮೋತಕಪಲ್ಲಿ ರಸ್ತೆ				ಕೋಲಕುಂದ–ಮಲ್ಲಾಪಲ್ಲಿ ರಸ್ತೆ			
	ಆಯ ವ್ಯಯ	ಆರ್‌ಎಲ್ ಇಜಿಪಿ	ಎನ್‌ಆರ್ ಇಪಿ	ಒಟ್ಟು	ಆಯ ವ್ಯಯ	ಆರ್‌ಎಲ್ ಇಜಿಪಿ	ಎನ್‌ಆರ್ ಇಪಿ	ಒಟ್ಟು
೮೫-೮೬	—	೦.೪೦	೨.೨೨	೨.೬೨	—	—	೦.೦೩	೦.೦೩
೮೬-೮೭	—	—	೦.೬೪	೦.೬೪	—	—	೦.೦೭	೦.೦೭
೮೭-೮೮	—	—	೦.೦೦	೦.೦೦	—	—	—	—
೮೮-೮೯	೧.೦	—	೦.೩೮	೧.೪೮	—	—	೦.೩೯	೦.೩೯
೮೯-೯೦	೨.೦	—	—	೨.೦೫	—	೧.೦೭	—	೧.೦೭
ಒಟ್ಟು	೩.೧೫	೦.೪೦	೩.೩೫	೬.೯೦	—	೧.೦೭	೦.೫೯	೧.೬೬